ಸಂಬಂಧಪಟ್ಟಿದ್ದಿದೆ. ಇದರಲ್ಲಿ ಕೆಲವು ಥ್ರೆಷೋಲ್ಡ್ ಬಹಳ ವಿಶೇಷ ಇದೆ. ಏಕೆಂದರೆ, ಮಳೆ ಮೊದಲಿದ್ದ ಹಾಗಿಲ್ಲ. ಒಂದು ಹೊಲದ ಮೇಲೆ ಬಿದ್ದರೆ ಇನ್ನೊಂದು ಹೊಲದ ಮೇಲೆ ಬೀಳುವುದಿಲ್ಲ. ಒಂದೊಂದು ಊರ ಮೇಲೆ ಬಿದ್ದರೆ ಮತ್ತೊಂದು ಊರಿಗೆ ಬಿಳುವುದಿಲ್ಲ, ಈ ಹೊಲದ ಮೇಲೆ ಬಿದ್ದರೆ ಇನ್ನೊಂದು ಹೊಲದ ಮೇಲೆ ಮಳೆ ಇಲ್ಲ. ಇವರು ಬೆಳೆ ತಾರತಮ್ಯ ನೋಡಿದರೆ ಯಾರಿಗೆ ಉಪಯೋಗವಾಗುತ್ತದೆ?

ಅಧ್ಯಕ್ಷರು: ಮಾನ್ಯ ಗುರುಪಾದಪ್ಪನವರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡೋಣ. ಆದರೆ, ಏನೆಂದರೆ, ಅವು ಬರುತ್ತಲೇ ಇಲ್ಲವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವು ಬರುವ ಹಾಗೆ ತಾವು ಏನಾದರೂ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು: ಆ ಪರಿಸ್ಥಿತಿಯಾಗಿದೆ. ಆಯಿತು ಒಂದು ಅವಕಾಶ ಮಾಡಿಕೊಡೋಣ.ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ.

ಅಫಜಲ್‌ಪೂರ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ

55(246) ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ) (ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಅಫಜಲಪುರ ತಾಲೂಕಿನ ಕರಜಗಿ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಕುಡಿಯುವ ಶುದ್ಧ ನೀರಿನ ವ್ಯವಸ್ಥೆಗಳಿಗೆ ಜಲ ನಿರ್ಮಲ ಯೋಜನೆ ಮಂಜೂರಾಗಿರುವುದು ನಿಜವೇ;

ಆ) ಇದೇ ಯೋಜನೆಯಲ್ಲಿ ಉಡಚಾಣ ಮತ್ತು ಮಾಶ್ಯಾಳ ಪಂಚಾಯತಿ ಪ್ರದೇಶವನ್ನು ಗುಂಪು ಗ್ರಾಮಗಳ ಕುಡಿಯುವ ನೀರಿನ ಯೋಜನೆಗೆ ಸೇರಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಉಡಚಾಣ ಮತ್ತು ಮಾಶ್ಯಾಳ ಪಂಚಾಯತಿಯ ತಮ್ಮ ಪಾಲಿನ ವಂತಿಗೆ ಕಟ್ಟಲು ಮುಂದೆ ಬಂದಿರುವುದು ನಿಜವೇ

ಈ) ಈ ಯೋಜನೆ ಕಡಿಮೆ ವೆಚ್ಚದಲ್ಲಿ ಪೂರ್ತಿಗೊಳ್ಳುವುದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಗೋವಿಂದ ಎಂ (ಕಾರ್ಜೋಳ): (ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ಸಚಿವರು):

ಅ) ಹೌದು ಜಲ ನಿರ್ಮಲ ಯೋಜನೆಯ 3ನೇ ತಂಡದಲ್ಲಿ ತೆಗೆದುಕೊಳ್ಳಲು ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮ ಪಂಚಾಯತಿ ಆಯ್ಕೆಯಾಗಿರುತ್ತದೆ. ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎರಡು ಗ್ರಾಮಗಳು ಬರುತ್ತವೆ.

ಆ) ಬೇಡಿಕೆ ಇದೆ. ಗುರಿ ಮೀರಿರುವ ಕಾರಣ ಯೋಜನೆಯಲ್ಲಿ ಸೇರಿಸಲು ಸಾಧ್ಯವಾಗುವುದಿಲ್ಲ.

ಇ) ಹೌದು

ಈ) ಹೌದು ಹೆಚ್ಚುವರಿ ಜಲಮೂಲ ಮತ್ತು ನೀರು ಸಂಗ್ರಹಣೆ ಕಾರ್ಯಗಳನ್ನು ಕಾರ್ಯಗತಗೊಳಿಸುವ ಮೂಲಕ ಹಾಲಿ ಇರುವ ನೀರು ಸರಬರಾಜು ಯೋಜನೆಯನ್ನು ಕಡಿಮೆ ವೆಚ್ಚದಲ್ಲಿ ಪುನಶ್ಚೇತನಗೊಳಿಸಲು ಹೆಚ್ಚು ಒತ್ತು ನಿಡಲಾಗುವುದು.

ಶ್ರೀ ಎಂ. ವೈ ಪಾಟೀಲ್: ನಾನು ಕೇಳಿದ (ಅ) ಪ್ರಶ್ನೆಗೆ ಉತ್ತರಿಸಿದ್ದಾರೆ. ಇದಕ್ಕೆ ಜಲ ಮೂಲ ಯಾವುದೆಂದರೆ, ಭೀಮಾ ನದಿಯಿಂದ ಈ ಕುಡಿಯುವ ನೀರಿನ ಯೋಜನೆ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಆಯ್ಕೆ ಮಾಡಿದ್ದಾರೆ. ಇದು ನಮಗೆ ಸಂತೋಷ ತಂದಿದೆ. ಆದರೆ ನಾಲ್ಕು ಕಿಲೋಮೀಟರ್ ದೂರದಲ್ಲಿ ಇನ್ನೂ ಎರಡು ಪಂಚಾಯಿತಿಗಳು ಬರುತ್ತವೆ. ಉಡಚಾಣ ಮತ್ತು ಮಾಶ್ಯಾಳ. ಮಾಶ್ಯಾಳ ಸುಮಾರು 10 ಸಾವಿರ ಜನಸಂಖ್ಯೆಯುಳ್ಳ ಗ್ರಾಮವಿದೆ. ಅಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆದರೂ ನೀರು ಬರುತ್ತಿಲ್ಲ. ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಒಂದು ಯೋಜನೆ ತೆಗೆದುಕೊಳ್ಳಬೇಕಾಗುತ್ತದೆ. ಆದರಂತೆ, ಉಡಚಾಣ ಗ್ರಾಮ ಪಂಚಾಯತಿಗೆ ಕೂಡ 6–7 ಸಾವಿರ ಜನಸಂಖ್ಯೆಯುಳ್ಳ ಗ್ರಾಮವಿರುವುದರಿಂದ ಅಲ್ಲಿಯೂ ಕುಡಿಯುವ ನೀರಿನ ತೊಂದರೆ ಇದೆ. ಅಲ್ಲಿ ಎಷ್ಟು ಬೋರ್‌ವೆಲ್ ಹಾಕಿದರೂ ನೀರು ಸಿಕ್ಕುತ್ತಿಲ್ಲ. ಈ ಎಲ್ಲಾ ಜಲಮೂಲ ಭೀಮಾ ನದಿಗೆ ಆಳವಡಿಸಬೇಕಾಗುತ್ತದೆ. ಆದ್ದರಿಂದ ಈ ಕರಜಗಿಯದು ಏನು ಯೋಜನೆ ಇದೆ ಅಕ್ಕ ಪಕ್ಕದಲ್ಲೇ ನಾಲ್ಕು ಕಿಲೋಮೀಟರ್ ದೂರದಲ್ಲಿ ಇವೆರಡೂ ಪಂಚಾಯಿತಿಗಳು ಬರುತ್ತವೆ. ಇದನ್ನು ಜೋಡಿಸಿದರೆ ವೆಚ್ಚವೇನಿದೆ ಬಹಳ ಕಡಿಮೆಯದರದಲ್ಲಿ ಆಗುತ್ತದೆ. ಪ್ರತ್ಯೇಕವಾಗಿ ಎರಡೂ ಯೋಜೆನಗಳನ್ನು ತೆಗೆದುಕೊಂಡರೆ ಹೆಚ್ಚಿನ ಹಣ ಖರ್ಚಾಗುತ್ತದೆ. ಹೀಗೇನು ನಮ್ಮ ಕರಜಗಿ ಪಂಚಾಯಿತಿಯನ್ನು ಜಲ ನಿರ್ಮಲ ಯೋಜನೆಯಲ್ಲಿ ತೆಗೆದುಕೊಂಡರೆ, ಅದಕ್ಕೆ ಜೋಡಿಸಿದರೆ ಒಳ್ಳೆಯದಾಗುತ್ತದೆ. ಆದಕ್ಕೆ ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ ಜಲ ನಿರ್ಮಲ ಕಾರ್ಯಕ್ರಮ 2002ರ ಏಪ್ರಿಲ್‌ನಲ್ಲಿ ಪ್ರಾರಂಭವಾದಂಥದ್ದು. ಈ ಜಲ ನಿರ್ಮಲ ಕಾರ್ಯಕ್ರಮಕ್ಕೆ ಉತ್ತರ ಕರ್ನಾಟಕದ 11 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಉತ್ತರ ಕರ್ನಾಟಕದ 11 ಜಿಲ್ಲೆಗಳಲ್ಲಿ 740 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿದ್ದೇವೆ. 929 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದು. ಇದು ಬೇಡಿಕೆಯಾಧಾರದ ಮೇಲೆ ಇರತಕ್ಕಂಥ ಪ್ರಾಜೆಕ್ಟ್. ಆದರೆ ಈಗಾಗಲೇ ಗುರಿ ಮುಟ್ಟಿದ್ದರಿಂದ ಈ ಹೆಚ್ಚಿನ ಹಳ್ಳಿಗಳನ್ನು ಸೇರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರೇನು ಹೇಳುತ್ತಾರೆ. ಕರಜಗಿಗೆ ಮಾಡಿದಂಥ ಯೋಜನೆಯೊಳಗೆ ಇವನ್ನೂ ಕೂಡ ಸೇರಿಸಬಹುದೆಂದು ಹೇಳುತ್ತಾರೆ. ಹಾಗಾಗುವುದಿಲ್ಲ. ಜನಸಂಖ್ಯೆಯಾಧಾರದ ಮೇಲೆ ಪ್ಲಾನ್ಸ್, ಎಸ್ಟಿಮೇಟ್ ಮಾಡಿ, ಡಿಸೈನ್ ಮಾಡಿ ಈಗಾಗಲೇ ಮಾಡಿರುತ್ತಾರೆ. ಮತ್ತೆ ಹೆಚ್ಚಿನ ಒತ್ತಡವನ್ನು ಇನ್ನೂ 20 ಸಾವಿರ, 15 ಸಾವಿರ ಜನಸಂಖ್ಯೆ ಇರತಕ್ಕಂಥದ್ದನ್ನು ಅದಕ್ಕೆ ಸೇರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಮಾನ್ಯ ಸದಸ್ಯರಿಗೆ ನಾನೊಂದು ಸಲಹೆ ಕೊಡುತ್ತೇನೆ. ಕುಡಿಯುವ ನೀರಿಗಾಗಿ ಬೇಕಾದಷ್ಟು ಯೋಜನೆಗಳಿವೆ. ಬೇರೆ ಯೋಜನೆಗಳಲ್ಲಿ ಇದನ್ನು ಕೈಗೊಳ್ಳಲಿಕ್ಕೆ ಸರ್ಕಾರದ ಸಿದ್ಧವಿದೆ. ಆ ರೀತಿ ಅವರು ಪ್ರಪೋಸಲ್ ಕೊಡಲಿ ಎಂದು ಹೇಳಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ.ವೈ. ಪಾಟೀಲ್: ಮಾನ್ಯ ಅಧ್ಯಕ್ಷರೆ ಈಗಾಗಲೇ ಮಾಶ್ಯಾಳ ಪಂಚಾಯಿತಿ ಮತ್ತು ಉಡಚಾಣ ಪಂಚಾಯಿತಿಗಳಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ. ಆದ್ದರಿಂದ ಎಷ್ಟು ದಿವಸಗಳಲ್ಲಿ ಬೇರೆ ಯೋಜನೆ ಹಾಕಿ ಇದನ್ನು ಮಂಜೂರು ಮಾಡಿಸುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸದಸ್ಯರು ಒಪ್ಪಿದರೆ, 2006–07ನೇ ಸಾಲಿನಲ್ಲಿ ಬೇರೆ ಯೋಜನೆಯಲ್ಲಿ ಇದನ್ನು ಮಂಜೂರು ಮಾಡಿಕೊಡಲಿಕ್ಕೆ ಸರ್ಕಾರ ಸಿದ್ಧವಿದೆ.

ಮುಂಡರಗಿ ತಾಲ್ಲೂಕಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರನ್ನು ಪೂರೈಸುವುದು.

56 (25) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಆಹಾರ ಸಚಿವರು ಮತ್ತು ನಾಗರಿಕ ಸರಬಾರಾಜು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಮುಂಡರಗಿ ತಾಲ್ಲೂಕು ಹಿರೇವಡ್ಡಟ್ಟಿ ಹಾಗೂ ಇತರೆ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರಿನ ಯೋಜನೆ ಮಂಜೂರಾಗಿ ಎಷ್ಟು ವರ್ಷಗಳು ಗಳಿಸಿವೆ;

ಆ. ಇಲ್ಲಿಯವರೆಗೆ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪ್ರಾರಭ ಮಾಡದಿರಲು ಕಾರಣಗಳೇನು;

ಇ. ಒಂದು ವೇಳೆ ಶೇ.10ರಷ್ಟು ಹಣ ತುಂಬಿದ್ದರೆ ಆ ಗ್ರಾಮಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಏನು ವ್ಯವಸ್ಥೆ ಮಾಡಲಾಗುವುದು?

ಶ್ರೀ ಗೋವಿಂದ ಎಂ. ಕಾರ್ಜೋಳ (ಆಹಾರ ಸಚಿವರು ಮತ್ತು ನಾಗರಿಕ ಸರಬಾರಾಜು):

ಅ. 4 ವರ್ಷಗಳಾಗಿವೆ.

ಆ. ಸಬ್–ಮಿಷನ್ ಯೋಜನೆ ನೀತಿಯನ್ವಯ ರೂ.238.57 ಲಕ್ಷ ಯೋಜನಾ ಅಂದಾಜಿನ ಮೇಲೆ ಶೇ.10ರಷ್ಟು ಸಮುದಾಯ ವಂತಿಗೆ ಸಂಗ್ರಹವಾಗದಿರುವ ಕಾರಣ ಕಾಮಗಾರಿಯು ಪ್ರಾರಂಭವಾಗಿರುವುದಿಲ್ಲ.

ಇ. ನೀರಿನ ಗುಣಮಟ್ಟದ ಸಮಸ್ಯೆಯಿರುವ ಗ್ರಾಮಗಳಿಗೆ ವಿಶೇಷವಾಗಿ ಈ ಯೋಜನೆಯನ್ನು ಮಂಜೂರು ಮಾಡಲಾಗಿದೆ. ಇಂತಹ ಪ್ರಕರಣಗಳಲ್ಲೆಲ್ಲಾ ಕನಿಷ್ಠ ಸಮುದಾಯ ವಂತಿಗೆ ತುಂಬದೆ ಯೋಜನೆ ಅನುಷ್ಠಾನಗೊಳಿಸುವುದು ಕಷ್ಟ ಮೊದಲ ಹಂತದಲ್ಲಿ ಕನಿಷ್ಠ 50% ಸಮುದಾಯ ವಂತಿಗೆ ಪಾವತಿಸಿದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿಶೇಷವಾಗಿ ಪರಿಗಣಿಸಲಾಗುವುದು. ಈಗಾಗಲೇ ಪರ್ಯಾಯವಾಗಿ ಹಿರೇವಡ್ಡಟ್ಟಿಯಲ್ಲಿ ಒಂದು ಡೀಫ್ಲೋರಿಡೇಷನ್ ಘಟಕವನ್ನು ಸ್ಥಾಪಿಸಿದ್ದು, 625ಗೃಹೋಪಯೋಗೆ DF ಪಿಲ್ಟರ್‌ಗಳನ್ನು ಸಹ ಅಸುಪಾಸಿನ ಸಂಸ್ಯಾತ್ಮಕ ಗ್ರಾಮಗಳ ಕುಟುಂಬಗಳಿಗೆ ಸರಬರಾಜು ಮಾಡಲಾಗಿದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ನಾನು 5 ವರ್ಷಗಳಿಂದ ಈ ಪ್ರಶ್ನೆ ಕೇಳುತ್ತಿದ್ದೇನೆ. ಅದಕ್ಕೆ ಪರಿಹಾರವೇ ಸಿಕ್ಕಿಲ್ಲ. ಉತ್ತರ ಅದೇ ಬರುತ್ತದೆ. ಆದರೆ, ಕೊನೆಯಾಗಿ ಒಂದು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರೆ ತಾವು ಹಳ್ಳಿಯಿಂದ ಬಂದವರು.